# ಪ್ರಣಯದ ಬಲೂನಿಗೆ ಚುಚ್ಚಿದ ನಿಜದ ಸೂಜಿಮುಳ್ಳು

ನೀನಾ ನನ್ನಲ್ಲಿ ಪರಿವರ್ತನೆ ತರಲು ಬಯಸುತ್ತಿದ್ದಳು. ಅದು ನನಗೆ ಒಪ್ಪಿಗೆಯಾಗಲಿಲ್ಲ. ನಾನು ಮುಕ್ತ ಮನಸ್ಸಿನಿಂದ ಅವಳ ಎಲ್ಲಾ ದೂರುಗಳು ಮತ್ತು ಅಪೇಕ್ಷೆಗಳನ್ನು ಕೇಳಿಸಿಕೊಂಡೆ. ನಾನು ಸದಾ ಅವಳಿಚ್ಛೆಯಂತೆಯೇ ನಡೆಯಲಾರೆ ಎಂಬುದನ್ನು ಅವಳು ಸಹ ಒಪ್ಪಿದಳು. ನಾನೇನು ದೇವರಲ್ಲ, ಮನುಷ್ಯ. ನನ್ನದೇ ಆದ ಒಂದು ಅಸ್ತಿತ್ವವಿದೆ, ವ್ಯಕ್ತಿತ್ವವಿದೆ. ವಾಸ್ತವವಾಗಿ ಥಾಯ್ಲೆಂಡ್ ನಮ್ಮಿಬ್ಬರಿಗೆ ಓರ್ವ ಚಿಕಿತ್ಸಕನಂತೆ ಕೆಲಸ ಮಾಡುತ್ತಿತ್ತು.

ಸಂಜೆ ಹೋಟೆಲ್‌ಗೆ ಮರಳಿ ಬಂದಾಗ, ಡೆನ್ಮಾರ್ಕ್‌ನಿಂದ ನಿಮಗೆ ಶೀಲಾ ದೇವಿ ಎಂಬುವವರಿಂದ ಫೋನ್ ಬಂದಿತ್ತು ಎಂದು ರಿಸೆಪ್ಷನಿಸ್ಟ್ ಹೇಳಿದಳು. ನಾವು ದಿನವಿಡಿಯ ಪ್ರಯಾಣದಿಂದ ದಣಿದಿದ್ದೆವು. ಸಮುದ್ರ ತೀರದ ಮರಳಿನಿಂದ ನಮ್ಮ ಬಟ್ಟೆ ಮತ್ತು ತಲೆಕೂದಲುಗಳು ಒದ್ದೆಯಾಗಿದ್ದವು. ಶೀಲಾ ದೇವಿಯವರ ಫೋನ್ ಬರುವುದು ಸಾಮಾನ್ಯ ಸಂಗತಿಯಾಗಿತ್ತು. ಅವರು ಕರೀನಾ ಮತ್ತು ಜೊಹಾನಾಳ ಬಗ್ಗೆ ಏನೋ ಹೇಳುವುದಿತ್ತೇನೋ ಅಥವಾ ತಮ್ಮ ಮಗಳೊಂದಿಗೆ ಕ್ಷೇಮ ಸಮಾಚಾರದ ವಿನಿಮಯ ಮಾಡಿಕೊಳ್ಳಬೇಕಿತ್ತೇನೋ? ನೀನಾ ಕೋಣೆಗೆ ಬಂದ ಕೂಡಲೇ ತನ್ನ ತಾಯಿಗೆ ಫೋನ್ ಮಾಡಲಾರಂಭಿಸಿದಳು. ನಾನು ಟವೆಲ್ ಹಿಡಿದು ಸ್ನಾನ ಮಾಡಲು ಹೋದೆ.

ನಾನು ಸ್ನಾನ ಮಾಡಿ ಬಂದಾಗ ನೀನಾ ಫೋನ್ ಬಳಿ ಬೇಸರದಿಂದ ಕೂತಿದ್ದಳು. ಅವಳು ನನಗೆ ಉದಾಸೀನದಿಂದ ಹೇಳಿದಳು,

'ಪಾಲ್, ವಿಷಯ ತುಂಬಾ ದುಃಖದಾಯಕವಾದದ್ದು. ನಿಮ್ಮ ತಂದೆ ಇನ್ನಿಲ್ಲ. ನಿಮ್ಮ ಸಹೋದರಿ ನನ್ನಮ್ಮನಿಗೆ ವಿಷಯವನ್ನು ತಿಳಿಸಿದ್ದಾಳೆ.'

'ಯಾವಾಗ?'

'ಮೂರು ದಿನಗಳಾದವು'.

ನಾನು ಮೈಮರೆತು ಹೋಟೆಲ್‌ನ ಲಾಬಿಯೆಡೆಗೆ ದೌಡಾಯಿಸಿದೆ. ಕಂಪ್ಯೂಟರ್ ತೆರೆದು ನನ್ನ ಇಮೇಲ್ ಅಕೌಂಟ್ ಲಾಗ್ ಇನ್ ಮಾಡಿದೆ. ನೀನಾ ಸಹ ನನ್ನನ್ನು ಹಿಂಬಾಲಿಸಿ ಬಂದು ಪಕ್ಕದಲ್ಲಿ ನಿಂತಿದ್ದಳು. ನನ್ನ ಇನ್‌ಬಾಕ್ಸ್ ಮೂವರೂ ಸಹೋದರ, ಸಹೋದರಿಯರ ಇಮೇಲ್‌ಗಳಿಂದ ತುಂಬಿತ್ತು. ಆರಂಭದ ಇಮೇಲ್‌ನಲ್ಲಿ ತಂದೆಯ ಕಾಯಿಲೆಯ ಬಗ್ಗೆ ಸುದ್ದಿಯಿತ್ತು: 'ಅಪ್ಪಾ ಅನಾರೋಗ್ಯದಲ್ಲಿದ್ದಾರೆ. ಥೋಮಸ್ ಹೋಪ್ ಹಾಸ್ಪಿಟಲ್‌ಗೆ ದಾಖಲಾಗಿದ್ದಾರೆ.'

ಎರಡನೆಯ ಇಮೇಲ್‌ನಲ್ಲಿತ್ತು: 'ಅಪ್ಪಂಗೆ ಬ್ರೇನ್ ಇನ್ಫೆಕ್ಷನ್ ಆಗಿದೆ. ಮೆದುಳಿನಲ್ಲಿ ಊತವಿದೆ, ಕೋಮಾದಲ್ಲಿದ್ದಾರೆ. ನಾವು ನಿನಗೆ ಫೋನ್ ಮಾಡಲು ಪ್ರಯತ್ನಿಸುತ್ತಿದ್ದೇವೆ... ನಿನ್ನ ಫೋನ್ ಸಿಗ್ತಿಲ್ಲ...'

ಮೂರನೆಯ ಇಮೇಲ್‌ನಲ್ಲಿತ್ತು: 'ನೀನೆಲ್ಲಿದ್ದೀಯ? ವಿಲಿಯಮ್ ತನ್ನ ಮೆಡಿಕಲ್ ಭಾಷೆಯಲ್ಲಿ ಇಮೇಲ್ ಮಾಡಿದ್ದ: 'ಅಪ್ಪಂಗೆ ಬ್ಯಾಕ್ಟೀರಿಯಲ್ ಮೆನಿನ್‌ಜಾಯಿಟ್ಸ್ ಆಗಿದೆ. ಮೆದುಳು ಮತ್ತು ಬೆನ್ನೆಲುಬಿನ ಅಕ್ಕಪಕ್ಕದ ಮೂರು ಮುಖ್ಯ ಪೊರೆ ಮತ್ತು ಮೇರುದಂಡದ ದ್ರವಕ್ಕೆ (ಸಿಎಸ್‌ಎಫ್) ಎಫೆಕ್ಟ್ ಆಗಿದೆ. ಇಂಥ ಸ್ಥಿತಿಯಲ್ಲಿ ರೋಗಿ ಉಳಿಯುವ ಲಕ್ಷಣಗಳು ಕಡಿಮೆ. ಅಮ್ಮಾ ನಿನ್ನನ್ನು ನೆನಪಿಸಿಕೊಳ್ಳುತ್ತಿದ್ದಾಳೆ. ತಕ್ಷಣ ಇಲ್ಲಿಗೆ ಬಾ.'

'ಪಾಲ್, ಅಪ್ಪಾ ಇನ್ನಿಲ್ಲ...'

ನಾನು ಮೂಕನಾಗಿದ್ದೆ. ನಾನು ಕೋಪನ್‌ಹೇಗನ್‌ನಿಂದ ಬ್ಯಾಂಕಾಕ್‌ಗೆ ವಿಮಾನದಲ್ಲಿ ಹೋಗುತ್ತಿರುವಾಗ, ನನ್ನಮ್ಮ

